**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :23 ಸಿಡಬ್ಲು :21

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಮತಿ. ಶಾಂತವ್ವ ಹನಮಂತ ಹಾದಿಮನಿ |
| ತಂದೆಯ ಹೆಸರು | : | ಶ್ರೀ.ಹಣಮಂತ ಹಾದಿಮನಿ |
| ವಯಸ್ಸು | : | 50 ವರ್ಷ ಮೇಲ್ಪಟ್ಟು |
| ಉದ್ಯೋಗ | : | ಕೂಲಿ ಕೆಲಸ |
| ವಾಸ್ತವ್ಯ | : | ಮುಗಳಖೋಡ |
| ದಿನಾಂಕ | : | 18-10-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1, ಚಾಸಾಃ 8 ರಿಂದ ಚಾಸಾಃ 20, ಚಾಸಾಃ 22 ರಿಂದ ಚಾಸಾಃ 32 ರವರು ನನಗೆ ಗೊತ್ತಿರುತ್ತಾರೆ. ಅವರೆಲ್ಲರೂ ನಮ್ಮೂರಿನವರು. ಆರೋಪಿತರೆಲ್ಲರೂ ನನಗೆ ಗೊತ್ತಿರುತ್ತಾರೆ. ಅವರು ನಮ್ಮ ಊರಿನವರು. ಅವರು ಜೈನ ಸಮುದಾಯಕ್ಕೆ ಸೇರಿದ್ದಾರೆ. ನಾನು ಹಿಂದೂ ಮಾದರ ಜಾತಿಗೆ ಸೇರಿದ್ದೇನೆ.

2. ನಮ್ಮೂರಿನ ಕೆರೆ ದಿನ್ನೆಯ ಮೇಲೆ ಇರುವ ಯಲ್ಲಮ್ಮನ ಪಾದಗಟ್ಟೆ ಪಕ್ಕದಲ್ಲಿರುವ ಜಾಗದಲ್ಲಿ ನಮ್ಮ ಸಮಾಜದವರು ಭವನ ಕಟ್ಟಬೇಕು ಎಂದು ಇದ್ದೇವು. ಅದಕ್ಕೆ ಜೈನ ಸಮುದಾಯದವರು ತಕರಾರು ತೆಗೆದು ಅವರು ಕಟ್ಟಡ ಕಟ್ಟಲು ಪ್ರಾರಂಭಿಸಿದ್ದರು. ಈಗ 8 ವರ್ಷಗಳ ಹಿಂದೆ ಈ ಘಟನೆ ನಡೆದಿರುತ್ತದೆ. ನಮ್ಮ ಸಮಾಜದವರೆಲ್ಲರೂ ಪಂಚಾಯತಿ ಕಚೇರಿಗೆ ಹೋಗಿ ಚೀಫ್ ಆಫೀಸರ ಅವರಿಗೆ ಹೇಳಿದೇವು, ಅವರು ಸ್ಥಳಕ್ಕೆ ಬಂದು ಜೈನ

ಸಮುದಾಯದವರಿಗೆ ಕಟ್ಟಡ ಕಟ್ಟಬಾರದು ಎಂದು ಹೇಳಿ ಹೊರಟು ಹೋದರು. ನಂತರ ಜಗಳ ಆಯಿತು.

3. ಆರೋಪಿತರು ನಮಗೆ ಜಾತಿ ಹೆಸರು ಹಿಡಿದು ಬೈದು, ಕಲ್ಲು,ಕಟ್ಟಿಗೆ ಮತ್ತು ಕಬ್ಬಿಣದ ರಾಡ್‌ನಿಂದ ಹೊಡೆದರು. ನನ್ನ ಬಲಕಾಲಿಗೆ ಮತ್ತು ಬಲಗೈಗೆ ಕಲ್ಲಿನಿಂದ ಏಟು ಬಿದ್ದಿತ್ತು. ಅದ ರೀತಿ ಸುಮಾರು ಹೆಣ್ಣು ಮಕ್ಕಳಿಗೂ ಮತ್ತು ಗಂಡಸರಿಗೂ ಗಾಯಗಳಾಗಿತ್ತು. ನಂತರ ನಮ್ಮನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದು, ನಂತರ ಕೆಲವೊಬ್ಬರಿಗೆ ಹೆಚ್ಚಿನ ಚಿಕಿತ್ಸೆಗಾಗಿ ನಾರಗೊಂಡ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು.

4. ಘಟನೆ ಬಗ್ಗೆ ಬಸಪ್ಪ ಬುರಡಿ ಮತ್ತು ಶಿವಲಿಂಗ ಬಾವಿಮನಿ ಅವರು ದೂರನ್ನು ನೀಡಿದ್ದಾರೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಮತ್ತು ರಾಯಬಾಗ ಕೋರ್ಟಿನಲ್ಲಿ ಹೇಳಿಕೆ ನೀಡಿದ್ದೇನೆ. ಅಲ್ಲಿ ಜಗಳವಾದ ಬಗ್ಗೆ ಹೇಳಿದ್ದೇನೆ. ಸಾಕ್ಷಿಯ ಹೇಳಿಕೆಯನ್ನು ಕಡತದಲ್ಲಿ ಇರಿಸಲಾಗಿರುತ್ತದೆ.

5. ಕಲ್ಲು, ಬಡಿಗೆ ಮತ್ತು ಕಬ್ಬಿಣದ ರಾಡ್‌ನ್ನು ಈಗ ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಬಿದಿರಿನ ಬಡಿಗೆ, ಕಬ್ಬಿಣದ ಸಲಾಕೆ ಮತ್ತು ಕಲ್ಲುಗಳನ್ನು ಸಾಕ್ಷಿ ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ಮು.ಮಾ.1, ಮು.ಮಾ.2 ಮತ್ತು ಮು.ಮಾ.3 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜೆ. ವಕೀಲರಿಂದ**

ವಿವಾದಿತ ಜಾಗವು ಆರೋಪಿತರ ಹೆಸರಿನಲ್ಲಿ ಇದೆ ಎನ್ನುವುದು ಸರಿಯಲ್ಲ. ಅದು ಸರ್ಕಾರಕ್ಕೆ ಸೇರಿದ್ದು ಸರ್ಕಾರದ ಹೆಸರಿನಲ್ಲಿದೆ. ನಾವು ಸುಮಾರು 11 ಜನ ಹೆಣ್ಣುಮಕ್ಕಳು

ಸ್ಥಳದಲ್ಲಿದ್ದೇವು. ಸುಮಾರು 25 ಜನ ಗಂಡಸರು ಇದ್ದರು. ಸ್ಥಳದಲ್ಲಿ ಕಲ್ಲಿನ ರಾಶಿ ಇದ್ದು ಕಲ್ಲುಗಳು ಬಿದ್ದಿದ್ದವು ಎನ್ನುವುದು ಸರಿ. ಘಟನೆ ನಡೆದ ದಿನ ನಾನೂ ಸಹ ಪಂಚಾಯತಿ ಕಚೇರಿಗೆ ಹೋಗಿದ್ದೇನು. ನಾವು ಸುಮಾರು 11 ಜನ ಹೆಣ್ಣುಮಕ್ಕಳು ಮತ್ತು ಗಂಡಸರು ಸೇರಿ ಸುಮಾರು 50 ಜನ ಪಂಚಾಯತಿ ಕಚೇರಿಗೆ ಹೋಗಿದ್ದೇವು.

2. ನಮ್ಮ ಸಮಾಜದವರು ಆರೋಪಿತರ ಮೇಲೆ ಕಲ್ಲಿನಿಂದ ಹೊಡೆದು ಹಲ್ಲೆ ಮಾಡಿದ್ದಾರೆ ಎಂದು ಸುಮಾರು 17 ಜನರ ಮೇಲೆ ಕೇಸ ದಾಖಲಾಗಿರುವುದು ನನಗೆ ಗೊತ್ತಿರುವುದಿಲ್ಲ. ನಮ್ಮ ಸಮಾಜದ ಸುಮಾರು 17 ಜನ 7–8 ವರ್ಷಗಳಿಂದ ಕೋರ್ಟಿಗೆ ಓಡಾಡುತ್ತಿರುವ ವಿಚಾರ ನನಗೆ ಗೊತ್ತಿರುತ್ತದೆ. ನನಗೆ ಜೈನ ಸಮುದಾಯದವರು ಕಲ್ಲಿನಿಂದ, ಕಬ್ಬಿಣದ ಸರಳಿನಿಂದ, ಕಟ್ಟಿಗೆಯಿಂದ ಹೊಡೆದಿರುವುದಿಲ್ಲ, ಆ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

3. ನನಗೆ ಘಟನೆಯಲ್ಲಿ ಗಾಯ ಆಗದೇ ಇದ್ದರೂ, ಆರೋಪಿತರು ನಮಗೆ ಜಾತಿ ಎತ್ತಿ ಬೈದಿರುವುದಿಲ್ಲ ಆದರೂ ಸಹ ನಮ್ಮ ಸಮಾಜದವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ರಾಯಬಾಗ ನ್ಯಾಯಾಲಯದಲ್ಲಿ ನಮ್ಮ ಸಮಾಜದವರು ಹೇಳಿಕೊಟ್ಟಂತೆ ಹೇಳಿದ್ದೇನೆ ಎನ್ನುವುದು ಸರಿಯಲ್ಲ. ನಾನು ಯಾರೋ ಹೇಳಿಕೊಟ್ಟಂತೆ ಹೇಳಲು ನಾನು ಸಣ್ಣವಳ್ಳಲ್ಲ ನಾನು ನಡೆದ ಘಟನೆಯನ್ನು ಸತ್ಯವಾಗಿ ಹೇಳಿದ್ದೇನೆ ಎಂದು ಹೇಳಿದ್ದಾರೆ.

4. ನನಗೆ ಯಾವುದೇ ಗಾಯ ಆಗಿರಲಿಲ್ಲ, ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಗಾಯ ಆಗಿತ್ತು ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ ಎಂದು ಹೇಳಿದ್ದಾರೆ. ನಮ್ಮ ಸಮಾಜದ ಬಸಪ್ಪ ಮಾದರ ಅವರು

ಕಲಿಸಿಕೊಟ್ಟಂತೆ ನಾನು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಯಾರು ಕಲಿಸಿಕೊಡಲು ನಾನು ಸಣ್ಣವಳಲ್ಲ ಎಂದು ಹೇಳಿದ್ದಾರೆ.

5. ವಿವಾದಿತ ಸ್ಥಳದಲ್ಲಿ ಮು.ಮಾ.1, ಮು.ಮಾ.2 ಮತ್ತು ಮು.ಮಾ.3 ರಂತಹ ವಸ್ತುಗಳು ಬಿದ್ದಿದ್ದವು ಎನ್ನುವುದು ಸರಿ.

**ಪಾಟೀ ಸವಾಲುಃ 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

1 ಮತ್ತು 2 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 3 ರಿಂದ 34 ನೇ ಆರೋಪಿತರ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.